ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ. ಧಾರವಾಡ

**ಸಿ.ಸಿ.ನಂಃ 3052/2023**

**ಫಿರ್ಯಾದಿದಾರರು** ಃ ಕರ್ನಾಟಕ ಸರಕಾರ,
ಪೊಲೀಸ ಸಬ್ ಇನ್ಸಪೆಕ್ಟರ,
ಉಪನಗರ ಪೋಲಿಸ ಠಾಣೆ ಧಾರವಾಡ.

**ವಿರುದ್ಧ**

ಆರೋಪಿತರು ಃ
1. ರಮೇಶ ಮಲ್ಲನಗೌಡ ಮರಿಗೌಡ
2. ಅಭಿಷೇಕ ಚನ್ನಬಸಪ್ಪ ಕಲ್ಲೂರು
3. ಯಲ್ಲಪ್ಪ ರಾಯಪ್ಪ ನೆಲದುರ್ಗ
4. ಶ್ರೀಶೈಲ ಮಲ್ಲಿಕಾರ್ಜುನ ಉಳ್ಳಿಗೇರಿ
5. ಮಂಜುನಾಥ ನಾಗಪ್ಪ ಜನೋಜಿ
6. ಸಂಜಯಕುಮಾರ ಲಕ್ಷಮನ ಮುದನೂರ
7. ಶ್ರೀನಿವಾಸ ಬಸವರಾಜ ಕರಚಕಟ್ಟಿ
8. ಬಸನಗೌಡಾ ದರ್ಮನಗೌಡ ಪಾಟೀಲ
9. ರಮೇಶ ದುಂಡಪ್ಪ ವಡರ
10. ರಾಹುಲ ನೇತಾಜಿ ರೋಖಡೆ

ದೋಷಾರೋಪಣೆ

ಅವಿನಾಶ್ ಎಂ. ಘಾಳಿ, ಬಿ.ಎ. ಎಲ್.ಎಲ್.ಬಿ., ಪ್ರಧಾನ ದಿವಾಣಿ ಮತ್ತು ಪ್ರಧಾನ ಜೆ.ಎಂ.ಎಫ್.ಸಿ ನ್ಯಾಯಾಧೀಶರು ಧಾರವಾಡ, ಆದ ನಾನು

ಇವರ ಮೇಲೆ ಕೆಳಕಂಡಂತೆ ದೋಷಾರೋಪಣೆ ಮಾಡುವುದೇನೆಂದರೆಃ

ಫಿರ್ಯಾದಿದಾರರು ದಿನಾಂಕಃ **18-06-2022** ರಂದು ಮುಂಜಾನೆ **11-15** ಗಂಟೆ ಸುಮಾರಿಗೆ ಧಾರವಾಡ ವ್ಯಾಪ್ತಿಯ ಉಪನಗರ ಪೊಲೀಸ ಠಾಣೆ ಹದ್ದಿಯ ನಾಯಕ ಅಡ್ಡಾ ಕ್ರಾಸ್ ಹತ್ತಿರ ಪಿರ್ಯಾದಿತರು ಕರ್ತವ್ಯದ ಮೇಲಿದ್ದಾಗ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಆ ಮೂಲಕ ಭಾ.ದಂ.ಸಂ. ಕಲಂ. 143 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

2 ಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಸದರಿ ವಿಷಯವಾಗಿ ಏಕೋದ್ದೇಶವನ್ನು ಮುಂದುವರೆಸುತ್ತಾ, ಆರೋಪಿ ನಂ.**1** ರಿಂದ **10** ನೇದವರಾದ ನೀವುಗಳು ಕೂಡಿಕೊಂಡು ಸಾರ್ವಜನಿಕ ರಸ್ತೆಯ ಮೇಲೆ ಸರಕಾರದ ಮಿಲ್ಟ್ರಿ ಭರ್ತಿಯ ಅಗ್ನಿ ಪಥ ಯೋಜನೆಯನ್ನು

ವಿರೋಧಿಸುತ್ತಾ ಆ ಮೂಲಕ ಭಾ.ದಂ.ಸಂ. ಕಲಂ. 145 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

3 ನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ದೊಂಬಿಯನ್ನುಂಟುಮಾಡಿ ಆ ಮೂಲಕ ಭಾ.ದಂ.ಸಂ. ಕಲಂ. 147 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

4 ನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಸದರಿ ವಿಷಯವಾಗಿ ಏಕೋದ್ದೇಶವನ್ನು ಮುಂದುವರೆಸುತ್ತಾ ಸಾರ್ವಜನಿಕರಿಗೆ ಮತ್ತು ವಾಹನಗಳಿಗೆ ಮುಂದೆ ಹೋಗದಂತೆ ಅಕ್ರಮವಾಗಿ ತಡೆದು ನಿಂತುಕೊಂಡು, ಫಿರ್ಯಾದಿದಾರರು ಆರೋಪಿತರಾದ ನಿಮಗೆ ನೀವು ಕೋರಿದಂತೆ ಈಗಾಗಲೆ ಎಡಿಸಿ ರವರನ್ನು ಸ್ಥಳಕ್ಕೆ ಕರೆಯಿಸಿದ್ದು ನೀವು ಮಾಡಿದಂತೆ ಮನವಿ ಕೊಡಿಸುವ ಪ್ರಯತ್ನ ಮಾಡಲಾಗಿದೆ ನಿವೆಲ್ಲರೂ ಶಾಂತ ರೀತಿಯಿಂದ ಇಲ್ಲಿಂದ ಹೋಗುವಂತೆ ಕೋರಿಕೊಡಾಂಗಲು ಸಹಾ ಆರೋಪಿ ನಂ.1 ರಿಂದ 10 ನೇದವರಾದ ನೀವು ಇದಕ್ಕೆ ಕಿವಿಗೊಡದೆ ಅಕ್ರಮವಾಗಿ ಸೇರಿಕೊಂಡು ಘೋಷಣೆಗಳನ್ನು ಕೂಗುತ್ತಾ ರಸ್ತೆ ಅಡ ತಡೆ ಮಾಡಿ ಅಲ್ಲದೆ ಬರ ಹೋಗುವ ವಾಹನ ಹಾಗೂ ಸಾರ್ವಜನಿಕರಿಗೆ ಅಡೆ ತೆಡ ಮಾಡಿ ಆ ಮೂಲಕ ಭಾ.ದಂ.ಸಂ. ಕಲಂ.341 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಸದರಿ ವಿಷಯವಾಗಿ ಏಕೋದ್ದೇಶವನ್ನು ಮುಂದುವರೆಸುತ್ತಾ ಆರೋಪಿಗಳಾದ ನೀವು ಸಾರ್ವಜನಿಕರಿಗೆ ಮತ್ತು ವಾಹನಗಳಿಗೆ ಮುಂದೆ ಹೋಗದಂತೆ ಅಕ್ರಮವಾಗಿ ತಡೆದದು ನಿಂತುಕೊಂಡು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಇದರಿಂದ ಅವರಿಗೆ ಅವಮಾನವಾಗಿ ಅವರು ಪ್ರಚೋದನೆಗೂಳ್ಳುತ್ತಾರೆಂದು ತಿಳಿದು ಈ ರೀತಿ ಬೈದು ಭಾ.ದಂ.ಸಂ. ಕಲಂ. 504 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ದೋಷಾರೋಪಣೆಯನ್ನು ನಿಮ್ಮ ಮೇಲೆ ಮಾಡಲು ನಾನು ಬದ್ಧನಾಗಿರುತ್ತೇನೆ.

ದಿನಾಂಕ ಃ 30-10-2025

(ಅವಿನಾಶ್ ಎಂ. ಘಾಳಿ)
ಪ್ರ.ದ. ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ., ಧಾರವಾಡ.